೬

# ತರಗತಿ ಚಟುವಟಿಕೆಗಳು

**- ಭಾವನಾಟಂಡನ್**

## ತಮಾಷೆಯ ಆಟ (ಡಾಮಿನೊಸ್ ಫನ್): ಚಟುವಟಿಕೆ- ೧

### ಉದ್ದೇಶಗಳು

- ಕೊಟ್ಟ ಸೂಚನೆಗಳನ್ನು ಕೇಳಿಸಿಕೊಳ್ಳುವಂತೆ ಮಾಡಿ ಶ್ರವಣ ಕೌಶಲವನ್ನು ಬೆಳೆಸುವುದು.
- ಶಬ್ದ ಸಂಪತ್ತನ್ನು ಹೆಚ್ಚಿಸುವುದು.

### ಸಾಮಗ್ರಿಗಳು

- ಅಕ್ಷರಗಳ ಕಾರ್ಡುಗಳು, ಚಿತ್ರಗಳ ಕಾರ್ಡುಗಳು, ಬಿಲ್ಲೆಗಳು (ರಟ್ಟನ್ನು ಚೌಕಾಕಾರದಲ್ಲಿ ಕತ್ತರಿಸಿ, ಅದರ ಮೇಲೆ ಅಕ್ಷರಗಳು ಮತ್ತು ಚಿತ್ರಗಳನ್ನು ಪ್ರತ್ಯೇಕವಾಗಿ ಅಂಟಿಸಿಕೊಳ್ಳಿ).
- ಗುಂಪಾಗಿ ಕುಳಿತುಕೊಳ್ಳಲು ನಿರ್ದಿಷ್ಟ ಸ್ಥಳ/ಮೇಜುಗಳು.

**ವ್ಯಾಪ್ತಿ:** ಪೂರ್ವ ಪ್ರಾಥಮಿಕ ಹಾಗೂ ೧-೨ನೇ ತರಗತಿಗಳ ಮಕ್ಕಳ ಗುಂಪು ಚಟುವಟಿಕೆಗಳು

### ವಿಧಾನ

- ತಲಾ ೫ ಮಂದಿಯಂತೆ ತರಗತಿಯ ಎಲ್ಲ ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ. ಗುಂಪಿನ ಪ್ರತಿ ಮಗುವಿಗೂ ಒಂದು ಬಿಲ್ಲೆಯನ್ನು ನೀಡಿ.
- ಪ್ರತಿ ಗುಂಪಿನ ಮೇಜಿನ ಮೇಲೆಯೂ ೫ರಿಂದ ೬ ಚಿತ್ರದ ಕಾರ್ಡುಗಳನ್ನು ಇರಿಸಿ. ಅಕ್ಷರದ ಕಾರ್ಡೊಂದನ್ನು ಅವರಿಗೆ ತೋರಿಸಿದಾಗ ಅಲ್ಲಿರುವ ಅಕ್ಷರದಿಂದ ಪ್ರಾರಂಭವಾಗುವ ಪದದ ಹೆಸರಿನ ಚಿತ್ರವನ್ನು ಅವರು ತತ್‌ಕ್ಷಣ ತೋರಿಸಬೇಕಾಗುತ್ತದೆ ಎಂಬುದನ್ನು ಅವರಿಗೆ ವಿವರಿಸಿ. ಉದಾ: ನೀವು 'ಮ' ಎಂಬ ಅಕ್ಷರವನ್ನು ತೋರಿಸಿದರೆ, ಮಕ್ಕಳು ತಮ್ಮ ಬಳಿ ಇರುವ ಚಿತ್ರಗಳಲ್ಲಿ 'ಮ' ಅಕ್ಷರದಿಂದ ಪ್ರಾರಂಭವಾಗುವ ಚಿತ್ರವನ್ನು ಗುರುತಿಸಬೇಕು ಮತ್ತುಅದರ ಮೇಲೆ ತಮ್ಮ ಬಿಲ್ಲೆಯನ್ನು ಇರಿಸಬೇಕು. ಉದಾ: ಮರ, ಮಳೆ, ಮಕ್ಕಳು ಇತ್ಯಾದಿ.
- ಈ ರೀತಿ ತೋರಿಸಲಾಗುವ ಅಕ್ಷರಗಳಿಂದ ಪ್ರಾರಂಭವಾಗುವ ಪದಗಳ ಚಿತ್ರಗಳನ್ನು, ಯಾವ ಗುಂಪು ಮೊದಲು ಗುರುತಿಸಿಸುವುದೋ ಆ ಗುಂಪು ಗೆದ್ದ ಹಾಗೆ.

೧ ಹಾಗೂ ೨ನೇ ತರಗತಿಗಳಿಗೆ ಚಿತ್ರಗಳಿರುವ ಕಾರ್ಡುಗಳನ್ನು ಸಮಾನಾರ್ಥಕ ಹಾಗೂ ವಿರುದ್ಧಾರ್ಥಕ ಪದಗಳ ಪರಿಕಲ್ಪನೆಯನ್ನು ಗಟ್ಟಿಗೊಳಿಸಲೂ

ಉಪಯೋಗಿಸಬಹುದು. ಶಿಕ್ಷಕರು ತೋರಿಸುವ ಪದದ ಸಮಾನಾರ್ಥಕಇಲ್ಲವೆ ವಿರುದ್ಧಾರ್ಥಕ ಪದಕ್ಕೆ ಸರಿಹೊಂದುವಕಾರ್ಡನ್ನು ಮಕ್ಕಳು ಗುರುತಿಸಿ ಅದರ ಮೇಲೆ ಬಿಲ್ಲೆಗಳನ್ನು ಇಡಬೇಕು.

**ಹುಡುಕುವ ಗಮ್ಮತ್ತು: ಚಟುವಟಿಕೆ- ೨**

## ಉದ್ದೇಶಗಳು

- ತಾರ್ಕಿಕ ಆಲೋಚನೆ ಹಾಗೂ ಅರ್ಥಗ್ರಹಿಕೆಯ ಕೌಶಲಗಳನ್ನು ಅಭ್ಯಾಸಮಾಡುವುದು.
- ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದು.

## ಸಾಮಗ್ರಿಗಳು

- ನೀವೇ ವಿನ್ಯಾಸಗೊಳಿಸಿ ಬಳಸಬಹುದಾದಚಟುವಟಿಕೆಯ ಹಾಳೆಗಳು.
- ಬಣ್ಣದ ಪೆನ್ಸಿಲ್‌ಗಳು ಅಥವಾ ಬಿಲ್ಲೆಗಳು.
- ಅಕ್ಷರಗಳ ಕಾರ್ಡುಗಳು.

**ವ್ಯಾಪ್ತಿ:** ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ತರಗತಿಗಳು

## ವಿಧಾನ

- ಪ್ರತಿ ಮಗುವಿಗೂ ಒಂದುಚಟುವಟಿಕೆಯ ಹಾಳೆಯನ್ನು ನೀಡಿ.
- ಅವರಿಗೆ ನೀಡಲಾದ ಹಾಳೆಯಲ್ಲಿರುವ ಮುಖದ ಚಿತ್ರಗಳನ್ನು ಗಮನಕೊಟ್ಟು ನೋಡಲು ಹೇಳಿ.

ಕೆಳಗಿನ ತರಗತಿಯ ಮಕ್ಕಳು ಅಲ್ಲಿರುವ ಮುಖದ ಹೆಸರನ್ನು ಶಿಕ್ಷಕರು ಹೇಳುವಾಗ ಆಲಿಸಬೇಕು, ಮತ್ತು ಸರಿಯಾದ ಅಕ್ಷರದ ಕಾರ್ಡನ್ನು ಮುಖದ ಚಿತ್ರವಿರುವ ಕಾರ್ಡಿನ ಮೇಲೆ ಇರಿಸಬೇಕು. ಮೇಲಿನ ತರಗತಿಗಳಲ್ಲಿ ಮಕ್ಕಳಿಗೆ ಶಿಕ್ಷಕರು ಚಿತ್ರವನ್ನು ವಿವರಿಸಬೇಕು. ಆ ವಿವರಣೆಗೆ ಸರಿಹೊಂದುವ ಚಿತ್ರವನ್ನು ಅವರು ಗುರುತಿಸಬೇಕು. ಉದಾ: ಗುಂಗರು ಕೂದಲು ಹಾಗೂ ಮೀಸೆ ಇರುವ ರಾಜುವನ್ನು ಗುರುತಿಸಿ, ಇಲ್ಲವೆ ಗಡ್ಡವಿರುವ, ಕನ್ನಡಕ ಧರಿಸಿರುವ, ಮಧ್ಯೆ ಬೈತಲೆತೆಗೆದಿರುವ ಫಯಾಜ್‌ನನ್ನು ಗುರುತಿಸಿ, ಇತ್ಯಾದಿಯಾಗಿ ಶಿಕ್ಷಕರು ಹೇಳಿದಾಗ ಮಕ್ಕಳು ಆ ವಿವರಣೆಗೆ ಸರಿ ಹೊಂದುವ ಚಿತ್ರಗಳನ್ನು ಗುರುತಿಸಬೇಕು.

***

**ಚಿಂತನಾತ್ಮಕ ಪ್ರಶ್ನೆಗಳು:**

೧. ಭಾಷಾ ಕಲಿಕೆಯಲ್ಲಿ ಪದಗಳ ಗುರುತಿಸುವಿಕೆ ಹಾಗೂ ಬಳಕೆಯಲ್ಲಿ ಶ್ರವಣಕೌಶಲದ ಪಾತ್ರವೇನು? ವಿವರಿಸಿ.

೨. ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕತರಗತಿಯ ಮಕ್ಕಳ ಚಟುವಟಿಕೆಯ ಮಧ್ಯದ ವ್ಯತ್ಯಾಸವನ್ನು ಚರ್ಚಿಸಿ.
೩. ಚಿತ್ರಗಳ ಮೂಲಕ ಪದಗಳನ್ನು ಗುರುತಿಸುವುದರ ಮಹತ್ತ್ವವನ್ನು ಚರ್ಚಿಸಿ.

**ಭಾವನಾಟಂಡನ್:** ಅವರು ನವದೆಹಲಿಯ ಆರ್ ಕೆ ಪುರಂನಡಿ ಪಿ ಎಸ್ ಶಾಲೆಯಲ್ಲಿ ಪ್ರಾಥಮಿಕ ತರಗತಿಗಳಿಗೆ ಕಳೆದ ಏಳು ವರ್ಷಗಳಿಂದ ಪಾಠ ಮಾಡುತ್ತಿದ್ದಾರೆ. ಇದಲ್ಲದೆ ಇವರು ದೆಹಲಿಯ ರೋಹಿಣಿಯಲ್ಲಿಯ ಬಾಲ ಭಾರತಿ ಶಾಲೆಯಲ್ಲಿಯೂ ಐದು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. bhavnatandan@gmail.com

**ಅನುವಾದಕರು:** ಉಷಾ ಬಿ ಎನ್
**ಪರಿಶೀಲಕರು:** ನಾಗಮಣಿಎಸ್ ಎನ್
ಮೂಲ: Language and Language Teaching Volume 2 Number 1 January 2013.